ದಿನಾಂಕ 1-7 ರಿಂದ ಈ ಕಾಮಗಾರಿಯನ್ನು ಜಿಲ್ಲಾ ಪರಿಷತ್‌ಗೆ ವರ್ಗಾವಣೆ ಮಾಡಲಾಗಿದ್ದು, ಜಿಲ್ಲಾ ಪರಿಷತ್ ಹಣ ಬಿಡುಗಡೆ ಬಗ್ಗೆ ಆರ್ಥಿಕ ಇಲಾಖೆಯೊಂದಿಗೆ ವ್ಯವಹರಿಸುತ್ತಿದೆ.

ಆ) ಹೌದು.

ಮೂಡಿಗೆರೆ ತಾಲ್ಲೂಕಿನಲ್ಲಿ ಏತ ನೀರಾವರಿ

855 - ಶ್ರೀಮತಿ ಮೋಟಮ್ಮ (ಮೂಡಿಗೆರೆ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ಮೂಡಿಗೆರೆ ತಾಲ್ಲೂಕಿನಲ್ಲಿ 1991-92 ನೇ ಸಾಲಿನಲ್ಲಿ ಎಷ್ಟು ಏತ ನೀರಾವರಿ ಯೋಜನೆ ಮಂಜೂರು ಮಾಡಲು ಕೋರಲಾಗಿದೆ?

ಆ) ಇದರಲ್ಲಿ, ಎಷ್ಟು ಏತ ನೀರಾವರಿ ಯೋಜನೆಗಳಿಗೆ ಈ ವರ್ಷ ಸರ್ಕಾರ ಮಂಜೂರು ಮಾಡಿರುವುದು?

ಇ) ಇವುಗಳಿಗೆ ನೀರಿನ ಪರವಾನಿಗೆ ಸಿಕ್ಕಿದೆಯೇ?

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು)

ಅ) ಎರಡು.

1. ಉದುಸೆ ಏತ ನೀರಾವರಿ ಯೋಜನೆ.

2. ಗೌತಹಳ್ಳಿ ಏತ ನೀರಾವರಿ ಯೋಜನೆ.

ಆ) ಕಾವೇರಿ ಜಲಾನಯನ ಏತ ನೀರಾವರಿ ನಿಗಮದ ಮಂಡಳಿಯಿಂದ ಉದುಸೆ ಏತ ನೀರಾವರಿ ಯೋಜನೆಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಗೌತಹಳ್ಳಿ ಏತ ನೀರಾವರಿ ಯೋಜನೆಯು ಪ್ರಾಥಮಿಕ ತನಿಖಾ ಹಂತದಲ್ಲಿದೆ.

ಇ) ಇನ್ನೂ ಇಲ್ಲ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಕೆ.ಹೆಚ್. ಪಾಟೀಲ್ : ಮಾನ್ಯ ಸಭಾಧ್ಯಕ್ಷರೆ, ಲಿಖಿತಮೂಲಕ ಉತ್ತರಿಸುವ 5ನೇ ಪಟ್ಟಿಯಲ್ಲಿರುವ ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ದಕ್ಷಿಣ ಕನ್ನಡ ಸರಪಾಡಿಯಲ್ಲಿ ಅಣೆಕಟ್ಟು ಕಾರ್ಯರೂಪಕ್ಕೆ ತರುವುದು.

550 - ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ದಕ್ಷಿಣ ಕನ್ನಡದ ಸರಪಾಡಿಯಲ್ಲಿ ಅಣೆಕಟ್ಟು ಕಾರ್ಯ ಯಾವ ಹಂತಕ್ಕೆ ಬಂದಿದೆ. ಹಾಗೂ ಇದಕ್ಕೆ ಎಷ್ಟು ಹಣ ಖರ್ಚಾಗುತ್ತದೆ?

ಆ) ಈ ಅಣೆಕಟ್ಟಿನ ಎತ್ತರ ಅಗಲ, ತೂಬುಗಳು ಇನ್ನಿತರ ರೂಪರೇಖೆಗಳೇನು?

ಇ) ಈ ಅಣೆಕಟ್ಟು ಕಾರ್ಯರೂಪಕ್ಕೆ ಯಾವಾಗ ಬರುವುದು?

ಈ) ಇದರಿಂದ ಯಾವ ಯಾವ ಭಾಗಗಳಿಗೆ ನೀರು ಪೂರೈಕೆಯಾಗುವುದು?

ಉ) ಇದರಿಂದ ಮುಳುಗಡೆಯಾಗುವು ಕೃಷಿ ಭೂಮಿ ಮತ್ತು ಮನೆಗಳಿಷ್ಟು ಹಾಗೂ ಇದರ ಪರಿಹಾರಕ್ಕೆ ಸರಕಾರ ತೆಗೆದುಕೊಳ್ಳುವ ಕ್ರಮಗಳೇನು?

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು)